ವಿಜಯ ಕರ್ನಾಟಕ

**Sunday, January 9th, 2011**

ತುಮಕೂರಿನ ಎನ್. ಮೋಹನ್ ಹಾಗೂ ಮೀನಾಕ್ಷಿ ಮೋಹನ್ ದಂಪತಿಗಳ ಪುತ್ರಿ ಸುರಭಿ ಭಾರದ್ವಾಜ್ ಜೈನ್ ಕಾಲೇಜ್‌ನಲ್ಲಿ ಬಯೋಟೆಕ್ನಾಲಜಿ ಓದುತ್ತಿದ್ದಾರೆ. ನಾಟ್ಯಗುರು ಕೆ.ಎಂ. ರಾಮನ್‌ರ ಬಳಿ ಪಂದನಲ್ಲೂರು ಶೈಲಿಯ ಭರತನಾಟ್ಯವನ್ನು ಕಲಿಯುತ್ತಿದ್ದಾರೆ. ಪೋಷಕರ ಪ್ರೋತ್ಸಾಹ ಹಾಗೂ ಕಠಿಣ ಪರಿಶ್ರಮದೊಂದಿಗೆ ನೃತ್ಯಾಭ್ಯಾಸ ಮಾಡಿ ಸಾರ್ವಜನಿಕ ವೇದಿಕೆಯಲ್ಲಿ ನರ್ತಿಸಿದ ಪರಿ ಅಭಿನಂದನೀಯ.



# ಕಣ್ಮನ ಸೆಳೆದ ನೃತ್ಯಾಂಜಲಿ

• ಸುಭದ್ರಾ ಸುಬ್ಬರಾವ್

ರವೀಂದ್ರ ಕಲಾಕ್ಷೇತ್ರದ ಆತ್ಯಾಕರ್ಷಕ ರಂಗವೇದಿಕೆಯಲ್ಲಿ ಇತ್ತೀಚೆಗೆ ನಡೆದ ಸುರಭಿ ಭಾರದ್ವಾಜ್‌ರ ರಂಗಪ್ರವೇಶ — ನಟರಾಜನಿಗೆ ಸಂದ ಸೊಗಸಿನ ಅರ್ಚನೆಯೇ ಆಗಿತ್ತು ಎಂದರೆ ಅತಿಶಯೋಕ್ತಿಯಲ್ಲ. ಅಷ್ಟು ಸೊಗಸಾಗಿ ತನ್ನ ನೃತ್ಯ ಪ್ರತಿಭೆಯನ್ನು ಪ್ರದರ್ಶಿಸಿದಳು ಸುರಭಿ.

ತುಮಕೂರಿನ ಎನ್. ಮೋಹನ್ ಹಾಗೂ ಮೀನಾಕ್ಷಿ ಮೋಹನ್ ದಂಪತಿಗಳ ಪುತ್ರಿ ಸುರಭಿ ಭಾರದ್ವಾಜ್ ಜೈನ್ ಕಾಲೇಜ್‌ನಲ್ಲಿ ಬಯೋಟೆಕ್ನಾಲಜಿ ಓದುತ್ತಿದ್ದಾರೆ. ನಾಟ್ಯಗುರು ಕೆ.ಎಂ. ರಾಮನ್‌ರ ಬಳಿ ಪಂದನಲ್ಲೂರು ಶೈಲಿಯ ಭರತನಾಟ್ಯವನ್ನು ಕಲಿಯುತ್ತಿದ್ದಾರೆ. ಪೋಷಕರ ಪ್ರೋತ್ಸಾಹ ಹಾಗೂ ಕಠಿಣ ಪರಿಶ್ರಮದೊಂದಿಗೆ ನೃತ್ಯಾಭ್ಯಾಸ ಮಾಡಿ ಸಾರ್ವಜನಿಕ ವೇದಿಕೆಯಲ್ಲಿ ನರ್ತಿಸಿದ ಪರಿ ಅಭಿನಂದನೀಯ.

ಸುರಭಿ ಭಾರದ್ವಾಜ್‌ರ ನೃತ್ಯ ಉತ್ತಮ ಅಂಗಶುದ್ಧಿ, ಬಿಕ್ಕಟ್ಟಿನ ಲಯ ಮಾದರಿಗಳು ಮತ್ತು ಅವುಗಳಿಗೆ ಸರಿ ಹೊಂದುವಂತಹ ಅಡವುಗಳು, ತೀರ್ಮಾನಗಳು ಕಿವಿಗಳನ್ನು ತುಂಬಿದವು. ಸೊಬಗಿನ ಆಂಗಿಕಾಭಿನಯ, ಚುರುಕಿನ ಪದಚಲನೆ, ತಾಳ, ಲಯ, ಸ್ವರ ಜ್ಞಾನದ ಜತೆಗೆ ಸುರಭಿ ನೃತ್ಯ ಕಾರ್ಯಕ್ರಮವನ್ನು ಲೀಲಾಜಾಲವಾಗಿ ನಡೆಸಿಕೊಟ್ಟು ತನ್ನ ನೃತ್ಯ ಪ್ರತಿಭೆಯನ್ನು ಯಶಸ್ವಿಯಾಗಿ ಅನಾವರಣಗೊಳಿಸಿದರು. ಸಾಂಪ್ರದಾಯಿಕ ಕಾರ್ಯಕ್ರಮದ ಪ್ರಾರಂಭ ಪುಷ್ಪಾಂಜಲಿ ಮತ್ತು ಅಷ್ಟದಿಕ್ಪಾಲಕ ವಂದನೆ ಮಾಡಿ ಅಲರಿಪುವಿನ ನೃತ್ಯಬಂಧದಲ್ಲಿ ದೇಹವನ್ನು ಹೂವಿನಂತೆ ಅರಳಿಸಿ ಚಲನೆ ಲಾಲಿತ್ಯಪೂರ್ಣವಾಗಿತ್ತು. ಶಂಕರಾಭರಣದ ಜತಿಸ್ವರ ನೃತ್ಯ ರಸದ ವೈಶಿಷ್ಟ್ಯ, ಜತಿಗಳ ಜೋಡಣೆ ನರ್ತಕಿಯ ಸಾಮರ್ಥ್ಯ ಶುದ್ಧ ಅಡವುಗಳ ವ್ಯಾಪ್ತಿ ಚಲನವಲನಗಳ ನೃತ್ಯದ ಸೊಬಗನ್ನು ಇಮ್ಮಡಿಗೊಳಿಸಿದರು.

ಸ್ವಾತಿ ತಿರುನಾಳ್‌ರ ರಾಗಮಾಲಿಕೆಯ ಶಬ್ದಂ ಪದ್ಮನಾಭ ಸ್ವಾಮಿಗೆ ವಂದನೆ, ಶ್ರೀಕೃಷ್ಣನ ಬಾಲಲೀಲೆಗಳು, ತುಂಟತನ, ಗೋಪಿಕೆಯರು ಜಳಕ ಮಾಡುವಾಗ ವಸ್ತ್ರಗಳನ್ನು ಕದ್ದು ಕೊಳಲನೂದುತ್ತಿರುವ ಬಗೆ, ನೆಲುವಿನ ಮೇಲಿಟ್ಟ ಹಾಲು, ಬೆಣ್ಣೆಗಳನ್ನು ಕದ್ದು ತಿಂದು ಕಾಡುವ ಪರಿ ಸರಿಯೇ ಎಂದು ಅಭಿನಯಿಸಿದ ನೃತ್ಯ ಸುಂದರವಾಗಿ ಮೂಡಿಬಂದಿತು. ಶಿವಾನಂದಪಿಳ್ಳೈ ಅವರ ಆನಂದ ಭೈರವಿ ವರ್ಣ ವಿರಹೋತ್ಕಂಠಿತ ನಾಯಿಕಾಭಾವ ನರ್ತಕಿಯ ಮನೋಧರ್ಮಕ್ಕೆ ಒತ್ತುಕೊಟ್ಟು ಪೂತನಾಮೋಕ್ಷ, ಗಜೇಂದ್ರ ಮೋಕ್ಷ ಇತ್ಯಾದಿ ರಚನೆಗಳ ಅಭಿನಯ ಸುಮಾರು 40 ನಿಮಿಷಗಳ ಕಾಲ ನಡೆಯಿತು. ಅದರಲ್ಲಿ ಮೂಡಿ ಬಂದ ನೃತ್ಯ ಮತ್ತು ಅಭಿನಯಗಳ ಹಲವಾರು ಕರಣಗಳು ಭಂಗಿಗಳು ಚಲನೆಗಳನ್ನು ಸುರಭಿ ನಿರಾಂತಕವಾಗಿ ರೂಪಿಸಿದರು. ಶ್ರೀ ಕೃಷ್ಣನು ಬೃಂದಾವನದಲ್ಲಿ ಗೋಪಿಕಾ ಸ್ತ್ರೀಯರೊಂದಿಗೆ ನರ್ತಿಸಿದ ವರ್ಣನೆ ಸುರಭಿ ಉತ್ತಮವಾಗಿ ನಿರೂಪಿಸಿದರು. ಕಾರ್ಯಕ್ರಮದ ಕೊನೆಗೆ ಫರಾಸ್ ರಾಗದ ತಿಲ್ಲಾನದಲ್ಲಿ ಧೃತ್ ಗತಿಯ ವಿವಿಧ ಅಡವು ವಿಭಿನ್ನ ನಡಿಗೆ ಹೊಂದಿಸಿ ಆಕರ್ಷಕ ಭಂಗಿಗಳಿಂದ ಚಮತ್ಕಾರಪೂರ್ಣವಾದ ಮುಕ್ತಾಯಗಳಿಂದ ಕೂಡಿದ ನೃತ್ಯ ಭಂಗಿಯಲ್ಲಿ ಸುರಭಿ ಭಾರದ್ವಾಜ್ ಉತ್ಕೃಷ್ಟ ಪ್ರದರ್ಶನ ನೀಡಿದರು.



ಸುಪ್ರೀಂ ಕೋರ್ಟ್ ನಿವೃತ್ತ ಮುಖ್ಯ ನ್ಯಾಯಾಧೀಶ ಎಂ.ಎನ್. ವೆಂಕಟಾಚಲಯ್ಯ, ಸರಕಾರದ ಕಾರ್ಯದರ್ಶಿಗಳಾದ ಬಿ.ಆರ್. ಜಯರಾಮರಾಜ್ ಅರಸ್, ಖ್ಯಾತ ನೃತ್ಯ ಗುರುಗಳಾದ ಟಿ.ಎಸ್. ಭಟ್ ಹಾಗೂ ಜೈನ್ ಶಿಕ್ಷಣ ಸಂಸ್ಥೆಯ ಸಂಸ್ಥಾಪಕ ಚೆನ್‌ರಾಜ್ ಜೈನ್‌ರಂತಹ ಗಣ್ಯ ಅಥಿತಿಗಳು ಸುರಭಿಯ ನೃತ್ಯ ಸಾಧನೆಯನ್ನು ಪ್ರಶಂಸಿಸಿದರು. ಪಕ್ಕವಾದ್ಯದಲ್ಲಿ ಕೆ.ಎಂ.ರಾಮನ್ (ನಟುವಾಂಗ), ಸಿ.ಚೆನ್ನಕೇಶವ (ಗಾಯನ), ಎಂ.ಆರ್. ರಂಗಸ್ವಾಮಿ (ಮೃದಂಗ), ಡಾ.ನಟರಾಜಮೂರ್ತಿ (ಪಿಟೀಲು), ಕೆ.ಎಸ್. ಗಣೇಶ್ (ಕೊಳಲು), ಜಿ. ಲಕ್ಷ್ಮಿನಾರಾಯಣ್ (ಮೋರ್ಚಿಂಗ್) ಇವರುಗಳ ಸಹಕಾರ ಹೆಚ್ಚಿನ ಶೋಭೆ ನೀಡಿತು. ಮೋಹನ್‌ರ ಅತ್ಯದ್ಭುತ ರಂಗಸಜ್ಜಿಕೆ ಮತ್ತು ಎನ್. ಅಪರ್ಣ ಅವರ ನಿರೂಪಣೆ ಕಾರ್ಯಕ್ರಮಕ್ಕೆ ಇನ್ನಷ್ಟು ಮೆರುಗು ನೀಡಿತ್ತು.